ಆಹಾರ ಇಲಾಖೆಯಿಂದ ವಿತರಿಸುವ ಆಹಾರ ಪದಾರ್ಥಗಳನ್ನು ಸ್ಟ್ಯಾಂಡರ್ಡೈಸ್ಡ್ ಬ್ಯಾಗ್‌ಗಳಲ್ಲಿ ವಿತರಣೆ.

571:(3997)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಹಾರ ಇಲಾಖೆ ಆಹಾರ ಪದಾರ್ಥಗಳನ್ನು ಸ್ಟ್ಯಾಂಡರ್ಡೈಸ್ಡ್ ಬ್ಯಾಗ್ ವಿತರಣೆ ವ್ಯವಸ್ಥೆ ಮಾಡಲು ಆಲೋಚಿಸಿರುತ್ತದಯೇ? ಹಾಗಿದ್ದಲ್ಲಿ ಇದರ ಅನುಷ್ಠಾನವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಆ) ಪ್ರಮಾಣಬದ್ದ ಅಳತೆ ವ್ಯವಸ್ಥೆ ಇಲ್ಲದಿರುವುದರಿಂದ ಆಗುವ ಅನಾನುಕೂಲಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು 100 ಕೆ.ಜಿ. ಚೀಲಗಳಲ್ಲಿ ಪ್ರಮಾಣಬದ್ದ (ಸ್ಟ್ಯಾಂಡರ್ಡೈಜೇಷನ್) ಮಾಡುವ ಬಗ್ಗೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಈಗಾಗಲೇ ನಿರ್ದೇಶನವನ್ನು ನೀಡಿದೆ

ಆ) ಹೌದು.

ಗುಳೇದಗುಡ್ಡ ಮತಕ್ಷೇತ್ರದ ಗ್ರಾಮಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು.

572:(4055)

ಶ್ರೀ ರಾಜಶೇಖರ್ ವಿ.ಶೀಲವಂತ್(ಗುಳೇದಗುಡ್ಡ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಸಾರಾಯಿ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ?

ಆ) ಮತಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಅನಧಿಕೃತವಾಗಿ ಸಾರಾಯಿ ಅಂಗಡಿಗಳು ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಸಾರಾಯಿ ಮಾರಾಟ ಮಾಡುವವರ ಮೇಲೆ ಸರ್ಕಾರದವರು

ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು):

ಅ) ಗುಳೇದಗುಡ್ಡ ಮತಕ್ಷೇತ್ರದ ಈ ಕೆಳಕಂಡ 27 ಗ್ರಾಮಗಳಲ್ಲಿ ಸಾರಾಯಿ ಮಾರಾಟ ಮಾಡಲು ಪರವಾನಗಿ ನೀಡಲಾಗಿರುತ್ತದೆ.

1) ಬೆನಕಟ್ಟಿ
2) ಬೇವೂರ
3) ಶಿರೂರ
4) ರಾಮದಾಳ
5) ಹೂವಿನಹಳ್ಳಿ
6) ಮಳ್ಳೂರ
7) ಭೂದನಗಡ
8) ಗುಳೇದಗುಡ್ಡ ನಂ. 1
9) ಗುಳೇದಗುಡ್ಡ ನಂ. 2
10) ಗುಳೇದಗುಡ್ಡ ನಂ. 3
11) ಗುಳೇದಗುಡ್ಡ ನಂ. 4
12) ಗುಳೇದಗುಡ್ಡ ನಂ. 5
13) ಗುಳೇದಗುಡ್ಡ ನಂ. 6
14) ಗುಳೇದಗುಡ್ಡ ನಂ. 7
15) ಗುಳೇದಗುಡ್ಡ ನಂ. 8
16) ಹಳದೂರ
17) ಕೋಲೆಕಲ್
18) ಕಟಗೇರಿ

19) ಲಕ್ಕಸಕೊಪ್ಪ

20) ಹಂಗರಿಗಿ

21) ಮುರಡಿ

22) ಬಾನಾಪೂರ

23) ಅಮೀನಗಡ

24) ರಕ್ಕಸಗಿ

25) ಸೂಳಿಭಾವಿ

26) ಐಹೊಳ್ಳಿ

27) ನಾಗರಾಳ ಎನ್. ಡಿ.

28) ಕೆಲೂರ

29) ಚಿಮ್ಮಲಗಿ

30) ಮಂಗಳಗುಡ್ಡ

31) ದಮ್ಮೂರ

32) ಗುಡೂರ ನಂ. 1

33) ಗುಡೂರ ನಂ. 2

34) ಗುಡೂರ ನಂ. 3

35) ಗುಡೂರ ನಂ. 4

36) ಹಳ್ಳೂರ

37) ಮುರಾಡಿ

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.